ವಿನಾಯಕ ತೊರವಿ, ಸಂಗೀತಾ ಕಟ್ಟಿ, ನಾಗರಾಜ ಹವಾಲ್ದಾರ ಮೊದಲಾದ ಕಲಾವಿದರು ಕೂಡ ಅಭಂಗಗಳನ್ನು ಹಾಡಿ ಕೇಳುಗರಿಗೆ ಭಕ್ತಿಯ ಸಿಂಚನ ಮಾಡಿದ್ದಾರೆ. ಹಿಂದೂಸ್ತಾನಿ ಸಂಗೀತ ಕಲಾವಿದರು ಶಾಸ್ತ್ರೀಯ ಸಂಗೀತ ಕಛೇರಿಯ ಕೊನೆಯಲ್ಲಿ ಅಭಂಗಗಳನ್ನೂ ಹಾಡಿ ಕಛೇರಿಯ ಒಂದು ಭಾಗವಾಗಿ ಇದನ್ನು ರೂಪಿಸಿಕೊಂಡ ಕಾರಣ ಮರಾಠಿ ಅಭಂಗಗಳು, ಮೀರಾ ಭಜನ್, ದಾಸರ ಪದ, ವಚನ ಮುಂತಾದ ಸಂಗೀತ ಪ್ರಕಾರಗಳು ಪ್ರಚಲಿತದಲ್ಲಿ ಉಳಿಯಲು ಕಾರಣವಾಗಿದೆ.



ಜೊತೆಗೆ ದಕ್ಷಿಣ ಭಾರತದಾದ್ಯಂತ ಭಜನ್ಸ್ ಜನಪ್ರಿಯತೆ ಪಡೆದುಕೊಂಡಿದೆ.

## ವಿಠಲನ ಮೇಲೆ ಅಭಂಗ

ವಿಠಲ ಎಂಬುದು ಭಗವಾನ್ ವಿಷ್ಣುವಿನ ಮತ್ತೊಂದು ಹೆಸರು, ವಿಶೇಷವಾಗಿ ಕೃಷ್ಣನ ರೂಪವನ್ನು ಸೂಚಿಸುತ್ತದೆ. ಹೀಗಾಗಿ ಭಕ್ತರು ವಿಠಲನ ಕೃತಿಗಳನ್ನು ಕೇಳಿ ಪಾವನರಾಗುತ್ತಾರೆ. ಪಂಢರಪುರಕ್ಕೆ ಹೋಗಿ ವಿನೀತರಾಗುವಂತೆ, ಇವರ ಮೇಲಿನ ಹಾಡುಗಳನ್ನು ಕೇಳಿ ಪುಳಕಗೊಳ್ಳುತ್ತಾರೆ.

ಪುರಂದರ ವಿಠಲ ಅಂಕಿತದೊಂದಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತ ಪಿತಾಮಹ ಪುರಂದರ ದಾಸರು ಸಾವಿರಾರು ಕೃತಿಗಳನ್ನು ರಚಿಸಿದ್ದಾರೆ. ಪಂಢರಪುರದ ಇಡೀ ದರ್ಶನವನ್ನೇ ಇವರ ಕೃತಿಗಳಲ್ಲಿ ಕಾಣಬಹುದು. ಈ ದಾಸ ಶ್ರೇಷ್ಠರು ರಚಿಸಿರುವ ಕೃತಿಗಳು ಭಕ್ತಿ ಪ್ರಧಾನವಾಗಿದ್ದು, ಜ್ಞಾನದ ಹರವನ್ನು ವಿಸ್ತರಿಸುವ ಕೆಲಸ ಮಾಡುವಲ್ಲಿ, ಸಾಮಾಜಿಕ ಕಳಕಳಿಯನ್ನು ಮೂಡಿಸುವಲ್ಲಿ, ಜನರಲ್ಲಿ ಸದ್ಭಾವನೆ ಬೆಳೆಸುವಲ್ಲಿ ಯಶಸ್ವಿಯಾಗಿವೆ.

ಗೋಡ ಗೋಡ ತುಝೆ ನಾಮ ವಿಠಲ ವಿಠಲ ರೇ; ಅನಂದ ಝಾಲಾ ಮಾಝಾ ಮನ ವಿಠಲ ವಿಠಲ ರೇ... ಎಂಬ ಅಭಂಗವೂ ಕೂಡ ಬಹಳ ಜನಪ್ರಿಯ. ಪುಣೆ ಸಮೀಪದ ದೇಹು ಎಂಬ ಊರಿನಲ್ಲಿ ಸರಿಸುಮಾರು ಹದಿನೇಳನೇ ಶತಮಾನದಲ್ಲಿ ಇದ್ದ ತುಕಾರಾಮ್ ಎಂಬ ಕವಿ ಪಂಢರಪುರದ ಮೇಲಿನ ಭಕ್ತಿ ಹಾಗೂ ಪ್ರೀತಿಯನ್ನು ಅಭಂಗ ರಚನೆಯ ಮೂಲಕ ವ್ಯಕ್ತಪಡಿಸಿ ಸಂತ ತುಕಾರಾಮ ಎನಿಸಿಕೊಂಡದ್ದು ಇತಿಹಾಸ. ಸಾಮಾಜಿಕ ಕಳಕಳಿ, ಸದ್ಭಕ್ತಿ ಮೂಡಿಸುವ ತುಕಾರಾಮನ ಅಭಂಗಗಳು ಜಗತ್ಪ್ರಸಿದ್ಧ ಜೊತೆಗೆ ಇಂದಿಗೂ ಉಪಯುಕ್ತವೆನಿಸಿವೆ.

ಮಾಝೆ ಮಾಹೇರ ಪಂಢರಿ,<br>
ಆಹೆ ಭೀವರೇಚ್ಯಾ ತೀರಿ1<br>
ಬಾಪ ಆಣಿ ಆಯಿ,<br>
ಮಾಝಿ ವಿಠಲ ರುಕುಮಾಯಿ1<br>
ಪುಂಡಲೀಕ ರಾಹೆ ಬಂಧೂ,<br>
ತ್ಯಾಚಿ ಖ್ಯಾತಿ ಕಾಯ ಸಾಂಗೂ1<br>
ಮಾಝೀ ಬಹಿಣ ಚಂದ್ರಭಾಗಾ,<br>
ಕರಿತಸೆ ಪಾಪ ಭಂಗಾ<br>
ಏಕಾ ಜನಾರ್ದನಿ ಚರಣಾ,<br>
ಕರಿ ಮಾಹೇರಚಿ ಆಠವಾಣ1<br>
ಮಾಝೆ ಮಾಹೇರ ಪಂಢರಿ,<br>
ಆಹೆ ಭೀವರೇಚ್ಯಾ ತೀರಿ..1

ಮರಾಠಿ ಭಾಷೆಯಲ್ಲಿರುವ ಈ ಅಭಂಗ ಅತ್ಯಂತ ಜನಪ್ರಿಯ. ಪಂಢರಪುರವೇ ತನ್ನ ತವರುಮನೆ, ಭೀಮಾನದಿ ತೀರದಲ್ಲಿರುವ ಮಹಾತ್ಮ ಬೇರಾರು ಅಲ್ಲ, ನಮ್ಮ ಅಪ್ಪ, ಅಮ್ಮನ ಪ್ರತಿರೂಪ. ಎಂದರೆ ಸಾಕ್ಷಾತ್ ವಿಠಲ ರುಕುಮಾಯಿ. ಚಂದ್ರಭಾಗಾ ನದಿ ಭೀಮಾ ನದಿಯ ಸಹೋದರಿ, ಅಲ್ಲಿ ಮಿಂದರೆ ಎಲ್ಲ ಪಾಪ ಪರಿಹಾರವಾಗುತ್ತವೆ. ಈ ಕ್ಷೇತ್ರದ ಮಹಿಮೆಯನ್ನು ಏನೆಂದು ವರ್ಣಿಸಲಿ ಎಂದು ಕವಿ ಪ್ರಶ್ನಿಸಿರುವುದು ಕೂಡ ಔಚಿತ್ಯಪೂರ್ಣವಾಗಿಯೇ ಇದೆ.

ಈ ಮರಾಠಿ ಅಭಂಗದ ಕನ್ನಡ ಅವತರಣಿಕೆಯನ್ನು ಪಂ. ನಾಗರಾಜ ಹವಾಲ್ದಾರ ಅವರು ಹಾಡಿದ್ದು ಕೇಳಲು ಆಪ್ಯಾಯಮಾನವಾಗಿದೆ. ಈ ಅಭಂಗವನ್ನು 'ಅಭಂಗವಾಣಿ' ('ಮರಾಠಿ ಅಭಂಗಗಳ ಭಾವಾನುವಾದಂ' ಎಂಬ ಆಲ್ಬಂ ಅನ್ನು ಶ್ರೀನಿವಾಸ ಕಾಳೆ ಹಾಗೂ ರಾಮ್ ಪಾಟಕ್ ಅವರ ಸಂಗೀತ ನಿರ್ದೇಶನದಲ್ಲಿ ಹೊರತರಲಾಗಿದ್ದು, ಇಡೀ ಪಂಢರಪುರದ ವರ್ಣನೆಯನ್ನು ಕಟ್ಟಿಕೊಡುವಂತಿದೆ.

ಕನ್ನಡ ಭಾಷಾಂತರದ ಈ ಹಾಡು ಹೀಗಿದೆ...

ನನ್ನ ತವರೂರೇ ಪಂಢರಿ,<br>
ಭೀಮಾ ತೀರಕೆ ಬನ್ನಿರಿ1<br>
ತಂದೆ ಹಾಗೂ ತಾಯಿ ಎನಗೆ<br>
ವಿಠಲ ರುಕುಮಾಯಿ1<br>
ಪುಂಡಲೀಕ ನನ್ನ ಬಂಧು<br>
ಅವನ ಖ್ಯಾತಿ ಹೇಳಲೇನು<br>
ನನ್ನ ತಂಗಿ ಚಂದ್ರಭಾಗಾ<br>
ಕಳೆಯುವಳು ಪಾಪ ಬೇಗ1<br>
ನಾ ಜನಾರ್ದನಗೆ ಶರಣು,<br>
ಅದೇ ತಾಯಿ ಮನೆಯ ಸ್ಮರಣ...1

ಭಕ್ತಿ ಪ್ರಧಾನ ಸಂಗೀತ ಯಾವಾಗಲೂ ನಿತ್ಯಹರಿದ್ವರ್ಣದಂತೆ. ದೈವೀ ಪ್ರಭೆಯ ಸಿಂಚನ ನೀಡುವ ಸಂಗೀತದ ಯಾವುದೇ ಪ್ರಕಾರವಿದ್ದರೂ ಭಕ್ತರಿಗೆ, ಕೇಳುಗರಿಗೆ ಸದಾ ಪುಳಕ ನೀಡುತ್ತವೆ. ಕಲ್ಯಾಣಿ, ಬೃಂದಾವನ ಸಾರಂಗ, ದುರ್ಗಾ, ಯಮನ್, ಮೋಹನ, ಹಂಸಧ್ವನಿಯಂತಹ ಭಕ್ತಿಪ್ರಧಾನ ರಾಗಗಳು ಸಂಗೀತ ಕಛೇರಿಗಳಲ್ಲಿ ವಿಜೃಂಭಿಸುವುದು ಇದೇ ಕಾರಣಕ್ಕಾಗಿ. ಪುರಂದರದಾಸರ ಕೀರ್ತನೆಗಳು ಜನಜನಿತವಾದದ್ದೂ ಕೂಡ ಜನರನ್ನು ಭಕ್ತಿಯ ಪರಾಕಾಷ್ಠೆಗೇರಿಸುವ ಸಲುವಾಗಿಯೇ. ಆಷಾಢದ ಹೊತ್ತಿನಲ್ಲಿ ಪಂಢರಪುರಕ್ಕೆ ಹೋಗಿ ಧನ್ಯರಾಗುವ ಭಕ್ತರ ಬಾಯಲ್ಲಿ ಇರುವುದು ಕೂಡ ವಿಠಲ ವಿಠಲ ಎಂಬ ಒಂದೇ ಉದ್ಗಾರ, ನರನಾಡಿಗಳಲ್ಲೂ ವಿಠಲನದ್ದೇ ಓಂಕಾರ..!

ಪ್ರತಿಕ್ರಿಯಿಸಿ: feedback@sudha.co.in